## 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,
## ಪೀಠಾಸೀನ ಕೊಳ್ಳೇಗಾಲ

**ಎಸ್.ಸಿ.** 5013/2026

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | : | ಮಾದೇವ | **ಪ್ರಮಾಣ ವಚನ ಭೋಧಿಸಿದ ದಿನಾಂಕ** | |
| **ತಂದೆ ಹೆಸರು** | : | ಮಹದೇವಶೆಟ್ಟಿ | 10.07.2026 | |
| **ವಯಸ್ಸು** | : | 37 ವರ್ಷ | | |
| **ವೃತ್ತಿ** | : | ಬಟ್ಟೆ ಅಂಗಡಿಯಲ್ಲಿ ಕೆಲಸ | **ಪ್ರಾ.ಸಾಃ** | 04 |
| **ವಾಸ ಸ್ಥಳ** | : | ದಾಸನದೊಡ್ಡಿ | **ಚಾ.ಸಾಃ** | 10 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನನಗೆ 1 ರಿಂದ 3 ನೇ ಆರೋಪಿತರು ಗೊತ್ತು. 4 ನೇ ಆರೋಪಿ ಗೊತ್ತಿಲ್ಲ. ಮೃತ ಉದಯಕುಮಾರ್, ಚಾಸಾ 1 ರಿಂದ 8 ಗೊತ್ತು. ಚಾಸಾ 10 ಮತ್ತು 11 ಗೊತ್ತು. 1 ನೇ ಆರೋಪಿ ಮತ್ತು ಮೃತನ ನಡುವೆ ಸುಮಾರು 7 ವರ್ಷಗಳ ಹಿಂದೆ ವಿವಾಹವಾಗಿರುತ್ತದೆ. ವಿವಾಹವಾದ ನಂತರ ಅವರು ಕುಣಗಳ್ಳಿಯಲ್ಲಿ ವಾಸವಿದ್ದರು. ಸುಮಾರು 1 ವರ್ಷಗಳವರೆಗೆ ಅವರು ಕುಣಗಳ್ಳಿಯಲ್ಲಿ ವಾಸವಿದ್ದರು. ಅವರಿಗೆ ಒಂದು ಹೆಣ್ಣು ಮಗು ಜನಿಸಿರುತ್ತದೆ. ನಂತರ 1 ನೇ ಆರೋಪಿ ನಮ್ಮ ಗ್ರಾಮಕ್ಕೆ ಬಂದರು. ನಂತರ ಮೃತನು 1 ನೇ ಆರೋಪಿಯನ್ನು ಮನೆಗೆ ಬರುವಂತೆ ಕರೆದನು. 1 ನೇ ಆರೋಪಿಯು ಮೃತನಿಗೆ ನೀನು ಬೇರೆ ಮನೆ ಮಾಡಿದರೆ ನಾನು ನಿನ್ನೊಂದಿಗೆ ಬರುತ್ತೇನೆ ಎಂದು ಹೇಳಿದಳು. ಮೃತನು ನಮ್ಮ ಮನೆಯನ್ನು ಎರಡು ಭಾಗ ಮಾಡುತ್ತೇನೆ ಎಂದು ಹೇಳಿದಳು. ಚಾಸಾ 1 ಮತ್ತು ಮೃತ ತಮ್ಮ ಮನೆಯ ನಡುವೆ ಒಂದು ಗೋಡೆಯನ್ನು ಕಟ್ಟಿ ಎರಡು ಭಾಗ ಮಾಡಿದರು. ಆದರೂ 1 ನೇ ಆರೋಪಿ ಮೃತನೊಂದಿಗೆ ವಾಸ ಮಾಡಲು ಹೋಗಲಿಲ್ಲ. ಮೃತನು 1 ನೇ ಆರೋಪಿಯನ್ನು

ಜೊತೆಯಲ್ಲಿ ಬರುವಂತೆ ಕರೆಯುತ್ತಿದ್ದನು. ಆದರೆ 1 ನೇ ಆರೋಪಿ ಬೇರೆ ಮನೆ ಮಾಡಿದರೆ ಮಾತ್ರ ಬರುತ್ತೇನೆ ಎಂದು ಹೇಳುತ್ತಿದ್ದಳು. ನಾವು ಅವರಿಬ್ಬರ ನಡುವೆ ಪಂಚಾಯಿತಿ ಮಾಡಿದೆವು. ಆದರೂ 1 ನೇ ಆರೋಪಿ ಬೇರೆ ಮನೆ ಮಾಡಿದರೆ ಮಾತ್ರ ಹೋಗುತ್ತೇನೆ ಎಂದು ಪಂಚಾಯಿತಿಯಲ್ಲಿ ಹೇಳಿದಳು. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯನ್ನು ಮೃತನ ಮನೆಗೆ ಕಳುಹಿಸಿಕೊಡಲಿಲ್ಲ. ನಾವು ಪಂಚಾಯಿತಿದಾರರು ಹೇಳಿದರೂ ಅವರು 1 ನೇ ಆರೋಪಿಯನ್ನು ಮೃತನ ಮನೆಗೆ ಕಳುಹಿಸಲಿಲ್ಲ. ಮೃತನು ಬೇರೆ ಮನೆ ಮಾಡಿದರೆ ಮಾತ್ರ 1 ನೇ ಆರೋಪಿಯನ್ನು ಆತನೊಂದಿಗೆ ಕಳುಹಿಸುತ್ತೇವೆ ಎಂದು ಹೇಳಿದರು.

ಮೃತನು ಸುಮಾರು 3 ವರ್ಷದ ಹಿಂದೆ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾನೆ. ಆತ ಯಾವ ವಿಚಾರಕ್ಕೆ ಆತ್ಮಹತ್ಯೆ ಮಾಡಿಕೊಂಡನು ಎಂದು ಗೊತ್ತಿಲ್ಲ. ನಮ್ಮ ಗ್ರಾಮಕ್ಕೂ ಕುಣಗಳ್ಳಿ ಗ್ರಾಮಕ್ಕೂ ಸುಮಾರು 30 ಕಿ.ಮೀ ಅಂತರ ಇರುತ್ತದೆ. ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೇಳಿದ್ದಾರೆ, ಅನುಮತಿ ನೀಡಿದೆ)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ದಿಃ **05.02.2024** ರಂದು ಮೃತನು **1** ನೇ ಆರೋಪಿಯನ್ನು ಕರೆಯಲು ಹೋದಾಗ ಆರೊಪಿತರು ಆತನೊಂದಿಗೆ ಜಗಳ ತೆಗೆದು, ನೀನು ವೆಸ್ಟ್ ಬಾಡಿ ನೀನು ಬದುಕಿರುವುದಕ್ಕಿಂತ ಸಾಯುವುದೇ ಮೇಲು ಎಂದು ನಿಂದನೆ ಮಾಡಿ ಆತನು ಸಾಯುವುದಕ್ಕೆ ಪ್ರಚೋದನೆ ಮಾಡಿದರು ಆಗ ನಾವು ಸಮಾಧಾನ ಮಾಡಿ ಕಳುಹಿಸಿದೆವು ಎಂದರೆ ಸರಿಯಲ್ಲ. ಮೃತನು ನಾನು ಸತ್ತು ಹೋಗುತ್ತೇನೆ ಎಂದು ಗ್ರಾಮದಲ್ಲಿ ಹೇಳಿಕೊಂಡು ಓಡಾಡುತ್ತಿದ್ದನು, ಎಂದರೆ ಸರಿಯಲ್ಲ, ದಿಃ **08.03.2024** ರಂದು ಪೋಲೀಸರು ಮೃತನ ಶವ ತನಿಖೆ ನಡೆಸುವಾಗ ಚಡ್ಡಿ

ಜೇಬಿನಲ್ಲಿ ಪತ್ರ ದೊರೆತಿರುತ್ತದೆ ಅದರಲ್ಲಿ ಮೃತನು ನನ್ನ ಸಾವಿಗೆ ಆರೋಪಿತರೇ ಕಾರಣ ಎಂದು ಬರೆದಿದ್ದನು ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ನಿಪಿ 32 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಗ್ರಾಮದವರಾಗಿದ್ದು, ಅವರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿ ನಮ್ಮ ಗ್ರಾಮದಲ್ಲೇ ವಾಸವಾಗಿದ್ದನು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ– ಶ್ರೀ ಸಿ.ಎಂ.ಜೆ ವಕೀಲರಿಂದ**

ಇಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ